# ಸಾಕ್ಷಿ ಪುರುಷ

ಮುದ್ದು ಮೊಮ್ಮಗಳು ಅನು ಒಮ್ಮೆ ಗೊಂಬೆ–
ಗಳೊಡನೆ ಒಬ್ಬಳೇ ಆಡುತ್ತಿರುವಾಗ
ನಾನೂ ಸೇರಬಯಸಿ ಏನೋ ಹೇಳ–
ಹೋದರೆ ಅವಳ ಮೂಡೇ ಕೆಟ್ಟು
"ನೀನು ಆಟದಲ್ಲಿಲ್ಲ ಅಜ್ಜ, ಬರಿ
ನೋಡುವುದು ನಿನ್ನ ಕೆಲಸ, ಸರಿ" ಎನ್ನ
ಬೇಕೇ? ಬಾಲ್ಯ, ಯೌವನ, ನಡು ವಯಸ್ಸು
ಎಲ್ಲ ಮೀರಿದ ನಾನು ಈಗ ಕೇವಲ
ಕಣ್ಣು, ಸಾಕ್ಷಿಪುರುಷ. ಈ ಸತ್ಯ
ಇನ್ನೂ ಸ್ಪಷ್ಟವಾದದ್ದು ಇತ್ತೀಚೆಗೆ
ದೂರದ ಅಮೆರಿಕೆಯಲ್ಲಿದ್ದಾಗ. ಪ್ರತಿದಿನ
ಬೆಳಿಗ್ಗೆ ಎಲ್.ಎ.ಟೈಮ್ಸ್ ಓದುತ್ತಿದ್ದಂತೆ–
ನನ್ನ ಪುರಾತನ ದೇಶ, ಅಪಾರ ಜನ
ಎಲ್ಲವೂ ಮರೆಯಾಗಿ, ಬಿಲ್ ಕ್ಲಿಂಟನ್,
ಬಾಬ್ ಡೋಲ್, ಓ.ಜೆ. ಸಿಂಪ್ಸನ್
ಶ್ಯಾಕ್ಸ್ ಮಾತೇ ದಿನದ ಸುದ್ದಿಯಾದಾಗ
ನನ್ನದೆಲ್ಲವೂ ಕರಗಿ ಹೋದಂತೆನಿಸಿ
ಹೆದರಿಕೆಯಾಯಿತು. ಅನು ಹೇಳಿದ್ದು
ನಿಜ. ನಾನೀಗ ಹೊರಗಿನವ. ನನ್ನ
ಕ್ಷೀಣ ಇಂದ್ರಿಯಗಳಿಗೆ ಕೆಲಸವೇ ಇಲ್ಲ.
ಹೀಗೆಯೇ ಇರಬಹುದೆ ಸಾವಿನ ಮೊದಲ ಕ್ಷಣ?

**ಎಂ.ಜಿ. ಹೆಗಡೆ**

ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಡಾ. ಎ.ವಿ. ಬಾಳಿಗಾ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿರುವ ಎಂ ಜಿ. ಹೆಗಡೆ ವಿಮರ್ಶಕ, ಪುಸ್ತಕಗಳ ಸಂಪಾದಕ ಮತ್ತು ತಾಳಮದ್ದಲೆಗಳ ಅರ್ಥಧಾರಿ. ನಾಲ್ಕು ನಾಟಕಗಳನ್ನು ಬರೆದಿದ್ದಾರೆ. 'ಗೌರೀಶ ಕಾಯ್ಕಿಣಿ', 'And Where Shall I Roost' ಅವರ ಪ್ರಕಟಿತ ಪುಸ್ತಕಗಳಾಗಿವೆ. ಅವರು ಕೆಲಕಾಲ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಭಾಷಾ ನಿಕಾಯದ ನಿರ್ದೇಶಕರಾಗಿ ಹಾಗೂ ಇಂಗ್ಲಿಷ ವಿಭಾಗ ಮುಖ್ಯಸ್ಥರಾಗಿಯೂ ಕೆಲಸ ಮಾಡಿದ್ದಾರೆ.

ಸಂಪಾದಿಸಿದ ಮುಖ್ಯ ಪುಸ್ತಕಗಳು: 'ಸಹಯಾನ', 'ಕಟಾಂಜನ', 'ಅಮೃತಬಿಂದು', 'ಗೌರೀಶರ ಅತ್ಯುತ್ತಮ ಬರಹಗಳು', 'ಸಮುದಾಯದ ಗಾಂಧಿ', ಇಂಗ್ಲಿಷ್‌ನಲ್ಲಿ Rethinking Tagore, Our Own Voices, Initiation, Aspects of ELT'.